# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.924/2018

| | | | |
|---|---|---|---|
| ಚಾಸಾ | **2** | ಪ್ರಾಸಾ | **2** |
| ಹೆಸರು | | ನಾಗೇಶ್ | |
| ತಂದೆಯ ಹೆಸರು / ಗಂಡನ ಹೆಸರು | | ಮಾದೇಗೌಡ | |
| ವಯಸ್ಸು | | **49** | |
| ಉದ್ಯೋಗ | | ಡೈರಿ ಕಾರ್ಯದರ್ಶಿ | |
| ವಿಳಾಸ | | ತಟ್ಟೆಕೆರೆ ಗ್ರಾಮ | |

ದಿನಾಂಕ.**07.07.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-**1** ರವರು ನನಗೆ ಗೊತ್ತು, ಚಾಸಾ-**3** ರಿಂದ ಚಾಸಾ-**5** ರವರು ನನಗೆ ಗೊತ್ತಿಲ್ಲ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮಹಜರ್

ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿನಾಂಕ.08.11.2017ರಂದು ಗಲಾಟೆಯಾದ ಸ್ಥಳದಲ್ಲಿ ಮಹಜರ್ ಮಾಡುವ ಕಾಲಕ್ಕೆ ನಾನು ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ. ಬೆಳಿಗ್ಗೆ 10.30 ರಿಂದ 11.30ಗಂಟೆಯ ಒಳಗೆ ನಿಪಿ-2ಕ್ಕೆ ನಾನು ಸಹಿ ಮಾಡಿರುತ್ತೇನೆ. ಆ ದಿನ ನಿಪಿ-2ನ್ನು ತಯಾರಿಸುವಾಗ ಸ್ಥಳದಲ್ಲಿ ನಾನು ಮತ್ತು ಮಹದೇವಯ್ಯ ಎನ್ನುವವರು ಮಾತ್ರ ಇದ್ದೆವು, ನಮ್ಮನ್ನು ಹೊರತುಪಡಿಸಿ ಮತ್ಯಾರು ಇರಲಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿಃ 09.12.2017ರಂದು ನಿಪಿ-2ರಂತೆ ಮಹಜರ್ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-2ನ್ನು ಹಾರೋಹಳ್ಳಿ-ತಟ್ಟೆಕೆರೆ ಮುಖ್ಯರಸ್ತೆ ಬಿಬಿಎಫ್ ಗ್ರೂಪ್ ಎಸ್ಟೇಟ್ ನ ಬಳಿ ಎಂದರೆ ಸರಿ. ನಿಪಿ-2ನ್ನು ತಯಾರಿಸುವ ಕಾಲಕ್ಕೆ ಸ್ಥಳದಲ್ಲಿ ಚಾಸಾ-1 ಮತ್ತು ಚಾಸಾ-3 ರವರು ಸಹ ನನ್ನೊಂದಿಗೆ ಹಾಜರಿದ್ದರು ಎಂದರೆ ಸಾಕ್ಷಿಯು ಚಾಸಾ-1 ರವರು ಇದ್ದದ್ದು ಗೊತ್ತು, ಆದರೆ ಚಾಸಾ-3 ರವರು ಇರಲಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಮಾಡುವ ಕಾಲಕ್ಕೆ ಪೊಲೀಸರು ಆರೋಪಿ ಚಾಸಾ-

**1** ರವರಿಂದ **5**ಸಾವಿರ ರೂಪಾಯಿ ಹಣವನ್ನು ಕಿತ್ತುಕೊಂಡ ಬಗ್ಗೆ ತಿಳಿಸಿ ಸ್ಥಳ ಮಹಜರ್ ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ**-** ಆರೋಪಿ ಪರ ವಕೀಲರಾದ ಶ್ರೀ ಎಂಎಂ ರವರಿಂದಃ**-**

ಆರೋಪಿ ಚಾಸಾ**-1** ರವರ ದೊಡ್ಡಪ್ಪನ ಮಗ ಎಂದರೆ ಸರಿ. ಚಾಸಾ**-1** ನನ್ನ ಸಂಬಂಧಿಕ ಎಂದರೆ ಸರಿ. ಚಾಸಾ**-1** ರವರೆ ಈ ದಿನ ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ**-1** ರವರೊಂದಿಗೆ ನಾನು ಚೆನ್ನಾಗಿ ಇದ್ದೇನೆ ಎಂದರೆ ಸರಿ. ನನಗೂ ಆರೋಪಿಗೂ ಮೊದಲಿನಿಂದಲ್ಲೂ ಸಂಬಂಧ ಸರಿಯಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆ ನನ್ನ ತಂದೆಯ ವಿರುದ್ದ ಅಸಲು ದಾವಾ ಸಂಖ್ಯೆ **19/2018**ರಡಿಯಲ್ಲಿ ಸಿವಿಲ್ ದಾವೆ ಹೂಡಿರುತ್ತಾರೆ ಎಂದರೆ ಸರಿ. ಈ ಸಂಬಂಧ ನನ್ನ ಮತ್ತು ಆರೋಪಿಯ ನಡುವೆ ಸಂಬಂಧ ಸರಿಯಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಈ ಪ್ರಕರಣದಲ್ಲಿ ಆರೋಪಿಯ ವಿರುದ್ದ ಸಾಕ್ಷ್ಯ ನುಡಿದ್ದುದ್ದಕ್ಕೆ ಅವರೆ ನಮ್ಮ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಪೊಲೀಸರು ಸ್ಥಳಕ್ಕೆ ಬಂದಿಲ್ಲ**,** ನಿಪಿ**-2**ರಂತೆ ಸ್ಥಳದಲ್ಲಿ ಮಹಜರ್ ನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ**.** ನಿಪಿ**-2**ನ್ನು ಸ್ಥಳದಲ್ಲಿ ತಯಾರಿಸಿಲ್ಲ**,** ಪೊಲೀಸ್ ಠಾಣೆಯಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ**-2**ಕ್ಕೆ ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ**.09.12.2017**ರಂದು ಪೊಲೀಸರು ಸ್ಥಳಕ್ಕೆ ಬಂದಿರಲಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ

ಮತ್ತು ನಮಗೂ ಸಂಬಂಧ ಸರಿಯಿಲ್ಲದೆ ಇರುವ ಕಾರಣಕ್ಕೆ ಚಾಸಾ-**1** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**